**ಉತ್ತಮ ಲೇಖನ**

ಮುಖಪುಟದ ಮೂರೂ ಲೇಖನಗಳು (ಸುಧಾ ಅ.15) ಚೆನ್ನಾಗಿವೆ. ಹುಲಿ ಸಂರಕ್ಷಣೆ ಮಾಡೋದು ಸರಕಾರಗಳ ಆದ್ಯ ಕರ್ತವ್ಯ. 2009ರಲ್ಲಿ ಆಗಸ್ಟ್ ತಿಂಗಳವರೆಗೆ ಕರ್ನಾಟಕದಲ್ಲಿ 6 ಹುಲಿ ಸತ್ತಿವೆ!

ಕಾಡುಗಳ್ಳ ವೀರಪ್ಪನ್ ಹೋದ ನಂತರ ಎಷ್ಟು ಹುಲಿ, ಆನೆ ಉಳಿದಿವೆ? ಶ್ರೀಗಂಧದ ಮರ, ಗ್ರಾನೈಟ್ ಕಲ್ಲು ಗಣಿ ಮುಂತಾದ ಉತ್ಪನ್ನ ಕಳ್ಳಸಾಗಣೆ ಯಾಗದೆ ಉಳಿದಿದ್ದೆಷ್ಟು? ಮತ್ತೊಂದು ಮುಖಪುಟ ಲೇಖನ ಬರಲಿ.

-ಆರ್ಕೆ ಹಾದಿಮನಿ, ಧಾರವಾಡ

**ಜಾಗೃತಿ ಮೂಡಿಸಿದ ಬರಹ**

'ಹುಲಿಗಂಡಕಾಲ' ಸುಮಂಗಲಾ ಮುಮ್ಮಿಗಟ್ಟಿಯವರ ಮುಖಪುಟ ಲೇಖನ ಅಳಿವಿನಂಚಿನಲ್ಲಿರುವ ಹುಲಿ ಸಂತತಿಯ ಉಳಿವಿನ ಅಗತ್ಯತೆಯನ್ನು ಓದುಗರಿಗೆ ಮನವರಿಕೆ ಮಾಡಿಕೊಟ್ಟು ಜಾಗೃತಿಯನ್ನು ಮೂಡಿಸಿದೆ.

-ಸತೀಶ್ ಶೆಟ್ಟಿಗಾರ್, ಜಪ್ತಿ/ ಪಿ.ಗೋವಿಂದರಾಜ್, ಶಿವಮೊಗ್ಗ




**ಮೌನ ಏಕೆ?**

ಹುಲಿಗಳ ಬೇಟೆ ನಿರಂತರವಾಗಿ ನಡೆದಿದ್ದರೂ ವನ್ಯಜೀವಿ ಸಂರಕ್ಷಕ ಸಂಘಟನೆಗಳು ಮೌನ ವಹಿಸಿರುವುದೇಕೆ? ಅಥವಾ ಪ್ರಚಾರಕ್ಕಾಗಿ ಮಾತ್ರ ಇಂತಹ ಸಂಘಟನೆಗಳು ಅಸ್ತಿತ್ವದಲ್ಲಿವೆಯೇ?

-ನಾಗ ದೇವಾಡಿಗ, ಕುಂದಾಪುರ

**ಅನುಕ್ರಮವಿಲ್ಲದ ಚಿತ್ರಗಳು!**

ಚಿತಾದಂತ ಧಾರಾವಾಹಿಯಲ್ಲಿ ಚಿತ್ರಗಳು ಮೋಹಕವಾಗಿರುವುದೇನೋ, ಸರಿಯೇ. ಆದರೆ ಒಮ್ಮೊಮ್ಮೆ ಆ ವಾರದ ಕಥೆಗೆ ಸಂಬಂಧಪಡದ ಚಿತ್ರಗಳಿರುತ್ತವೆ. ಚಾಲ್ತಿ ಪ್ರಕಟವಾಗುತ್ತಿರುವ ವಿಷಯಕ್ಕೆ ಸಂಬಂಧಿಸಿಯೇ ಚಿತ್ರಗಳಿರಲಿ.

-ರಾಜಶೇಖರಗೌಡ, ಕೊಟ್ಟೂರು

**ಉಪಯುಕ್ತ**

ಮನಸೇ... ಓ ಮನಸೇ... ಡಾ. ಕೆ.ಎಸ್. ಪವಿತ್ರರವರ ಲೇಖನ ಉಪಯುಕ್ತ ಹಾಗೂ ಸಮಯೋಚಿತ.

-ದೇಶವಳ್ಳಿ ಶಿವು, ಚಾಮರಾಜನಗರ

**ಪುಳಕ**

'ಫೋಟೋ ಅಲ್ಲ, ಚಿತ್ರ' (ವಿದ್ಯಾ ಹೆಚ್. ಹಾಲಭಾವಿ) ನೋಡಿ ಪುಳಕವಾಯಿತು. ತದ್ರೂಪು ಕ್ಯಾಮೆರಾದಿಂದ ಕ್ಲಿಕ್ಕಿಸಿದಂತಿದ್ದವು ಈ ಪೇಂಟಿಂಗ್ಸ್, ಭೇಷ್.

-ಪಿ. ಮಹೇಶ್, ಬೆಂಗಳೂರು

**ಪುಟಾಣಿ ಕಥೆ**

ನುಗ್ಗೆಹಳ್ಳಿ ಪಂಕಜ ಅವರ ಪುಟಾಣಿ ಕಥೆಗಳು ಸೊಗಸಾಗಿದ್ದವು. ಮಕ್ಕಳ ಮುಗ್ಧತೆಯಲ್ಲಿಯೂ ಏನೋ ಒಂದು ವಿಧವಾದ ರಂಜನೆ ಈ ಕಥೆಗಳಿಂದ ಅರೆಗಳಿಗೆ ದೊರೆಯಿತು.

-ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ

**ಎಲ್ಲಿ ಕೇಳಿದರು?**

ಎಲ್ಲೋ ಕೇಳಿದ್ದು ಎಂದು ನುಗ್ಗೆಹಳ್ಳಿ ಪಂಕಜ ಬರೆದಿರುವ ಮಕ್ಕಳ ಕಥೆಗಳು ಎಳೆಯರ ಅಂಗಳದಲ್ಲಿ ಹಿಂದೆ ಪ್ರಕಟವಾಗಿದ್ದ ನೆನಪು.

-ತರಂಗಿಣಿ, ತುಮಕೂರು

**ಮನ್ನಾ ಡೇ ಲೇಖನ ಸಮಯೋಚಿತ**

ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪಡೆದ ಮಹಾನ್ ಗಾಯಕ ಮನ್ನಾಡೇ ಬಗ್ಗೆ ಬಂದಿರುವ ಲೇಖನ ಸಮಯೋಚಿತವಾಗಿದೆ.

'ಆಧಾ ಹೈ ಚಂದ್ರಮಾ ರಾತ್ ಆಧೀ' ಹಾಡನ್ನು ಹಾಡಿರುವುದು ಮನ್ನಾಡೇ ಅಲ್ಲ, ಮಹೇಂದ್ರ ಕಪೂರ್ (ಆಶಾ ಭೋಸ್ಲೆ ಒಟ್ಟಿಗೆ).

-ಪಿ.ಎಸ್. ರಾಜಗೋಪಾಲ್, ಮೈಸೂರು/ ಪ್ರಭಾ ಪ್ರಸಾದ್, ಬೆಂಗಳೂರು

**ಮರೆತ ಹಾಡು**

'ಸೀಮಾ' ಚಿತ್ರದ ಅತ್ಯಂತ ಸುಮಧುರ ಹಾಡು (ಭಜನ್) 'ತೂ ಪ್ಯಾರ್ ಕಾ ಸಾಗರ ಹೈ ತೆರಿ ಎಕ್ ಬೂಂದಕೆ ಪ್ಯಾಸೇ ಹಮ್' ಎಂಬ ಹಾಡು ಲೇಖಕರ ನೆನಪಿಗೆ ಬಂದಿಲ್ಲ!

-ಎಚ್.ಆರ್. ದೇಸಾಯಿ, ರಾಯಚೂರು

**ಕನ್ನಡದಲ್ಲಿ ಮನ್ನಾಡೇ**

ಕನ್ನಡದಲ್ಲಿ ಮನ್ನಾಡೇ ಹಾಡಿರುವ ಕಲಾವತಿ ಚಿತ್ರದ ಕುವೆಂಪುರವರ 'ಕುಹು ಕುಹೂ ಎನ್ನುತ ಹಾಡುವ' ಹಾಗೂ ಕಲ್ಪವೃಕ್ಷ ಚಿತ್ರದ 'ಜಯತೇ ಜಯತೇ ಸತ್ಯಮೇವ ಜಯತೇ' ತುಂಬಾ ಜನಪ್ರಿಯ.

-ಚಿದಂಬರ ಕಾಕತ್ಕರ್, ಮಂಗಳೂರು/ ಸುಧಾರಾಜ್, ಮೈಸೂರು/ ನೆ.ಲ.ರಾಂ, ಬೆಂಗಳೂರು

**ಸೇರಿಸಬಹುದಿತ್ತು**

ಮಧುರ ಹಾಡು, 'ಸುರನಾ ಸಜೆ... ಕ್ಯಾ ಗಾಂವು ಮೈ', 'ಭಯ ಭಂಜನಾ ವಂದನಾ' ಎರಡೂ– ಬಸಂತ್ ಬಹಾರ್ ಚಿತ್ರ. 'ಪೂಚೊನ ಕೈಸೆ ಮನ ರೈನ ಗುಜಾರಿ' (ಚಿತ್ರ 'ತೇರಿ ಸೂರತ್, ಮೇರಿ ಆಂಖೆ') 'ರಿತುವಾಯಿ' (ಲತಾರ ಜೊತೆ ಪರಿಣೀತ ಚಿತ್ರ)– ಇಂತಹ ಇಂಪು ಗಾಯನ ಚಿತ್ರ ಸಂಗೀತ ಪ್ರಿಯರ ಎದೆಯಲ್ಲಿ ಚಿರಸ್ಥಾಯಿ ಎನಿಸುತ್ತದೆ. ಇದನ್ನು ಸೇರಿಸಬಹುದಿತ್ತು.

-ಬಿ.ಪಿ. ಶಿವಾನಂದರಾವ್, ಬೆಂಗಳೂರು

**ಮಾರಾಟ!**

ವಿಚಾರ ಲಹರಿಯಲ್ಲಿ (ಯಾವಾಗ ಬಂದ್ಯಪ್ಪ ಮಳೆರಾಯ?) ವೈನತೇಯರು 'ಒಕ್ಕಲಗೇರ್ಯಾಗ ಮಳೆರಾಯ/ ಮಕ್ಕಳ ಮಾರ್ಯಾರು...' ಎಂಬ ಜನಪದ ಗೀತೆಯನ್ನು ಉದ್ಧರಿಸಿದ್ದಾರೆ. ಬರದಲ್ಲಿ ಮಕ್ಕಳ ಮಾರಾಟ ಹೊಸದಲ್ಲ. ಆದರೆ ಈಗ ಭಾರ್ಯಾ ಮಾರಾಟದ ಸುದ್ದಿಗಳು! ಅಯ್ಯೋ ಭಾಗ್ಯಹೀನ ಭಾರತವೆ!

-ಸಿಪಿಕೆ, ಮೈಸೂರು

-ಎಂ.ಎಸ್. ಲಕ್ಷ್ಮಣರಾವ್, ದಾವಣಗೆರೆ

**ಓದುಗರ ಗಮನಕ್ಕೆ**

ಕಳೆದ ವಾರದ (22 ಅಕ್ಟೋಬರ್ 09) ಸುಧಾ ಸಂಚಿಕೆಯ ಜೊತೆಗೆ, 'ರಿಲಿಶ್ ಡಯಟ್ ಶುಗರ್'ನ ಉಚಿತ ಸ್ಯಾಂಪಲ್ ಅನ್ನು ಕೇವಲ ಬೆಂಗಳೂರಿನ ಮಾರುಕಟ್ಟೆಗಷ್ಟೇ ವಿತರಿಸಲಾಗಿದೆ. ಬೆಂಗಳೂರು ಹೊರತಾದ ಇತರ ಜಿಲ್ಲೆಗಳಿಗೂ ಈ ಪ್ರಕಟಣೆ ಮುದ್ರಣವಾಗಿದ್ದು, ಓದುಗರಲ್ಲಿ ಗೊಂದಲ ಮೂಡಿಸಿದ್ದಕ್ಕೆ ವಿಷಾದಿಸುತ್ತೇವೆ.

-ಸಂ




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು



ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ, ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ನಂ.162/2, ಷಾಪ್ ನಂ. 2, ಗಣೇಶ ಕಾಂಪ್ಲೆಕ್ಸ್, ಮೈಸೂರು ರಸ್ತೆ, (ಸಿರಸಿ ವೃತ್ತ), 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಗೌರಿ ಟೆಕ್ಸ್‌ಟೈಲ್ಸ್ ಕೆಳಗಡೆ, ಚಾಮರಾಜಪೇಟೆ, ಬೆಂಗಳೂರು–560 018.

9880444450

ಮೈಸೂರು ಶ್ರೀಚಕ್ರ ಜ್ಯೋತಿಷ್ಯಾಲಯ ಪಂಡಿತ್ ಶ್ರೀ ಸಂತೋಷ್‌ಕುಮಾರ್ ಮನೆ: ಯಶಸ್ವಿನಿ ಕಲ್ಯಾಣ ಮಂಟಪದ ಹತ್ತಿರ, ಎಸ್.ಆರ್.ಎಸ್. ಗೇಟ್ ಎದುರುಗಡೆ, ಹುಣಸೂರು ರೋಡ್, ಹೂಟಗಳ್ಳಿ, ವಿಜಯನಗರ 4ನೇ ಹಂತ, ಮೈಸೂರು – 18.

9845899127